# <u>ಶರಣು ಶರಣು ನಿನಗೆಂಬೆನೊ ವಿಠಲ</u>

(Version – 2)

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 277.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 104.
3. **Note:** Lyrics given without highlights are as per Ref. 1. The wordings given in yellow highlights are as per Ref. 2.
4. **Note:** Singer has followed the lyrics as in Ref. 1 (given without highlights).
5. **Note:** There is one more version taken from the standard reference book. There are many wordings which are similar but majority of them are different. Hence, they are listed under "Version 1 – sharaNu ninage sharaNu ninagembenu viTTala".
6. **Note:** The Ankita is different in both the reference books. We have considered book in Ref.1 as standard and taken that Ankita for listing.

| | |
|---|---|
| ರಾಗ ಮಧ್ಯಮಾವತಿ ಅಟ ತಾಳ | ರಾಗ: ಕೇದಾರಗೌಳ ತಾಳ: ಏಕ |
| | |
| ಶರಣು ಶರಣು ನಿನಗೆಂಬೆನೊ ವಿಠಲ | ಶರಣು ಶರಣು ನಿನಗೆಂಬೆನೊ ವಿಠಲ |
| ಕರುಣಾನಿಧಿಯೆಂಬೆ ಕಾಯಯ್ಯ ವಿಠಲ ॥ ಪ ॥ | ಎರವು ಮಾಡದೆಯೆನ್ನ ಕಾಯೊ ವಿಠಲ |
| | |
| ಶಿಶುವಾಗಿ ಜನಿಸಿದ್ಯೊ ಶ್ರೀರಾಮ ವಿಠಲ | ಅರಸಿ ರುಕ್ಮಿಣಿಗೆ ನಿನೇನಂದೆಯೊ ವಿಠ್ಠಲ |
| ಶಶಿಧರನುತ ಗೋಪಿ ಕಂದನೆ ವಿಠಲ | ಸರಸಿಜ ಸಂಭವ ಸನ್ನುತ ವಿಠ್ಠಲ |
| ಅಸುರೆ ಪೂತನಿ ಕೊಂದ ಶ್ರೀ ಕೃಷ್ಣವಿಠಲ | ಬಿರುದಿನ ಶಂಖವ ಪಿಡಿದೆಯೊ ವಿಠ್ಠಲ |
| ಕಸುಮನಾಭ ಸಿರಿವರ ಮುದ್ದು ವಿಠಲ ॥ 1 ॥ | ಅರಿತು ಇಟ್ಟಿಗೆ ಮೇಲೆ ನಿಂತೆಯೊ ವಿಠ್ಠಲ |
| | |
| ಅರಸಿ ರುಕ್ಮಿಣಿಗೆ ನೀ ಅರಸನೊ ವಿಠಲ | ಶಶಿಮುಖಿ ಗೋಪಿಯರ ರಾಜನೆ ವಿಠ್ಠಲ |
| ಸರಸಿಜ ಸಂಭವ ಸನ್ನುತ ವಿಠಲ | ಕುಶಲದಿ ಗಜುಗವನಾಡಿದೆ ವಿಠ್ಠಲ |
| ನಿರುತ ಇಟ್ಟಿಗೆ ಮೇಲೆ ನಿಂತ್ಯೊ ನೀ ವಿಠಲ | ದಶರಥ-ನಂದನ ರಾಮನೆ ವಿಠ್ಠಲ |
| ಚರಣ ಸೇವೆಯನಿತ್ತು ಕಾಯಯ್ಯ ವಿಠಲ ॥ 2 ॥ | ಕುಸುಮಬಾಣನಯ್ಯ ಕಾಯೊ ನೀ ವಿಠ್ಠಲ |
| | |
| ಕಂಡೆ ಗೋಪುರ ವೆಂಕಟ ಪ್ರಭು ವಿಠಲ | ಕಂಡೆ ಗೋಪುರದ ವೆಂಕಟನೆ ವಿಠ್ಠಲ |
| ಅಂಡಜ ವಾಹನ ಹೌದೊ ನೀ ವಿಠಲ | ಅಂಡಜಾಧಿಪ ವಾಹನನೆ ವಿಠ್ಠಲ |
| ಪಾಂಡು ನಂದನ ಪರಿಪಾಲನೆ ವಿಠಲ | ಪಂಢರಿ ಕ್ಷೇತ್ರದ ಪಾಲನೆ ವಿಠ್ಠಲ |
| ಪುಂಡರೀಕಾಕ್ಷ ಶ್ರೀ ಪುರಂದರ ವಿಠಲ ॥ 3 ॥ | ಪುಂಡರೀಕ ವರದ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ತಿರುಮಲೆಯ ವೆಂಕಟೇಶ್ವರನನ್ನೂ ಪಂಢರಪುರದ ಪಾಂಡುರಂಗ ವಿಟ್ಠಲನನ್ನೂ ಒಂದೇ ದೈವವೆಂದು ಬಗೆದು ಸ್ತುತಿಸಿದೆ.

**ಎರವು** = ಪಕ್ಷಪಾತ, ಭೇದ

**ಬಿರುದಿನ** = ನಿನ್ನ ವಿಶಿಷ್ಟ ಚಿನ್ಹೆಯಾದ ಶಂಖ

**ಇಟ್ಟಿಗೆ ಮೇಲೆ ನಿಂತ್ಯೋ** – ಭಕ್ತನಾದ ಪುಂಡಲೀಕನು ತಾಯಿ ತಂದೆಯರ ಸೇವೆಯಲ್ಲಿದ್ದಾಗ ಪಾಂಡುರಂಗನು ಬರಲು ಅವನಿಗಾಗಿ ಹತ್ತಿರವಿದ್ದ ಒಂದು ಇಟ್ಟಿಗೆಯನ್ನೇ ಅವನೆಡೆ ಸರಿಸಿದನೆಂದೂ, ಪಾಂಡುರಂಗನು ಆ ಇಟ್ಟಿಗೆಯ ಮೇಲೆ ನಿಂತನೆಂದೂ ಸ್ಥಳಪುರಾಣ; ಈಗಲೂ ವಿಟ್ಠಲನು ಇಟ್ಟಿಗೆಯ ಮೇಲೆ ನಿಂತಿರುವಂತೆಯೇ ಮೂರ್ತಿ ಲಕ್ಷಣ.

**ಕುಶಲದಿ ಗಾಜುಗವನಾಡಿದೆ ವಿಠ್ಠಲ** = ಕೃಷ್ಣನು ಬಾಲಕನಾಗಿ ಗೋಪಾಲಕರೊಂದಿಗೆ ಗಜುಗ ಚಿಣಿಕೋಲು ಚಂಡುಗಳನ್ನಾಡಿದ ಸ್ಥಳವೆಂದು ಜನರು ಪಂಢರಪುರದಲ್ಲಿ ಇಂದಿಗೂ ತೋರಿಸುತ್ತಾರೆ. ಡಿನ್ ಡೀರ ವನ ಎಂದು ಆ ಸ್ಥಳಕ್ಕೆ ಹೆಸರಿದೆ.

**ಕುಸುಮಬಾಣ** = ಕಾಮ

**ಅಂಡಜಾಧಿಪ** = ಗರುಡ

**Classification:** Keerthane
**Ankita:** sri purandara vittala
**Location:** Tirupati
**Category:** Srinivasa Stuti, Vishnu Stuti, Pooja Tatva
**Sub-Category:** Vishnu, srinivasa, karuna, koosu, rama, Dasharatha, gopi, asura, putani, Krishna, Rukmini, ittige, garuda, shankha, raja,
**Pravachana:** NA
**Explanation:** NA